ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಅವರು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರೋ, ಇಲ್ಲವೋ ? ಅವರ ರಿಪ್ಲೈ ಮುಗಿದ ನಂತರ ಎಲ್ಲರಿಗೂ ಅವಕಾಶ ಕೊಡುತ್ತೇನೆ. ದಯವಿಟ್ಟು ಈಗ ಯಾರೂ ಮಧ್ಯ ಕೇಳಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಗೋಶಾಲೆ ವಿಚಾರ ಏಕೆ ಹೇಳುತ್ತಿದ್ದೇನೆಂದರೆ, ರಾಷ್ಟ್ರದಲ್ಲಿ ಈ ಪ್ರಥಮವಾದ ಹೆಜ್ಜೆಯನ್ನು ಸರ್ಕಾರ ಇಟ್ಟಿದೆ. ಈ ಬರಗಾಲದಲ್ಲಿ ಇಂತಹ ಒಂದು ಪ್ರಯತ್ನ ಮಾಡಿದೆ ಹಿಂದೆ ಯಾವಾಗಲೂ ಈ ರೀತಿ ಮಾಡಿಲ್ಲವೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ಏನೋ ಒಂದು ಪ್ರಚಾರಕ್ಕಾಗಿ ಅಲ್ಲ. ಎಲ್ಲಿ ಚೆನ್ನಾಗಿಲ್ಲ, ಅದನ್ನು ಸರಿಪಡಿಸೋಣ. ಮಾನ್ಯ ನಂಜಯ್ಯಮಠ ಅವರು ಎರಡು ಗೋಶಾಲೆಗಳ ಬಗ್ಗೆ ಸ್ಪಷ್ಟವಾದ ವಿವರಗಳನ್ನು ಕೊಟ್ಟರು. ಅವರು ಆ ಭಾಗದ ಸದಸ್ಯರು. ಅದೇರೀತಿ ಮುಂಡರಗಿ ವಿಚಾರದ ಬಗ್ಗೆಯೂ ಹೇಳುತ್ತೇನೆ. ಇದು ಕೂಡ ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ.

ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಆದರ್ಶವಾದ ಗೋ ಶಾಲೆಗಳನ್ನು ಮಾಡಿದ್ದೀರೆಂದು ನೋಡಿ ಬಂದವರು ಹೇಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ, ತಾವು ದಯವಿಟ್ಟು ಆಮೇಲೆ ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ರಾಷ್ಟ್ರದಲ್ಲಿ ಪ್ರಥಮವಾಗಿ ಪ್ರತಿಯೊಂದೂ ನೀವೇ ಮಾಡಿರುವ ತರಹ ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿದ್ದನ್ನು ಹೇಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾಡಿದ್ದರೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ — ಬನ್ನಿ, ನಿಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಮಾಡಿದ್ದನ್ನು ಮಾಡಿದ್ದೇವೆಂದು ಹೇಳುತ್ತಿದ್ದೇವೆ ಅಷ್ಟೇ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಬೊಮ್ಮಾಯಿಯವರು ಏನು ಮಾಡಿದ್ದಾರೆಂದು ನರಂಗ ತೋರಿಸಲಿ. ಕೋಲಾರ ಜಿಲ್ಲೆಯಲ್ಲಿ ಎರಡು ಗೋಶಾಲೆಗಳನ್ನು ಮಾಡಿದ್ದಾರೆ, ಆದರೆ ಅಲ್ಲಿ ಇವರು ಹೇಳಿದ ಪ್ರಕಾರ ಇಲ್ಲ.

ಶ್ರೀ ಎಸ್. ಎಸ್. ಕಡಪಟ್ಟಿ.—ದಯವಿಟ್ಟು ತಾವಿಬ್ಬರೂ ಹುನಗುಂದ ತಾಲ್ಲೂಕಿಗೆ ಬಂದು ನೋಡಬೇಕು. ಅಲ್ಲಿ ಬಹಳ ಚೆನ್ನಾಗಿ ಗೋಶಾಲೆಗಳನ್ನು ನಡೆಸುತ್ತಿದ್ದಾರೆ,

ಶ್ರೀ ಯು. ಭೂಪತಿ.—ನೀವು ಹೇಳುವ ಜಾಗದಲ್ಲಿ ಎರಡೂ ನೂರು ದನಗಳೂ ಇಲ್ಲ. ಸುಮ್ಮನೆ ಏಕೆ ಹೇಳುತ್ತಿದ್ದೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ನಿಮ್ಮ ಜಿಲ್ಲೆಗೂ ಹೋಗಿ ನೋಡಿಕೊಂಡು ಬಂದಿದ್ದೇನೆ.

ANNOUNCEMENT

Parliamentary Delegation from USSR

MR. SPEAKER.—A parliamentary delegation from USSR headed by H. E Mr. Vassily V. Kuznetsov, Alternate Member of the Politbureau of the CPSU Central Committee, First Vice Chairman of the Presidum of the Supreme Soviet of the USSR has arrived in Bangalore to-day. The delegates are now in the Official Gallery. On behalf of the members of this House and on my own, I extend a very warm and hearty welcome, and I hope they will enjoy their brief stay in the city.